

ಐಫೋನ್‌ನಲ್ಲಿ 'ಅಮಿಸ್ಟ್ ಮೈ ಓನ್' ಸಿನಿಮಾ ಚಿತ್ರೀಕರಣ

ಯಾವಾಗಲೂ ತುಂಬಿ ತುಳುಕುವ, ಅಮೆರಿಕದ ಹಾಲಿವುಡ್ ಬುಲೆವಾರ್ಡ್‌ನಲ್ಲಿರುವ 'ವಾಕ್ ಆಫ್ ಫೇಮ್'ನಲ್ಲಿ ನಡೆಯುತ್ತಿತ್ತು. ಕೊರೊನಾ ಸ್ಥಿತಿ ಗಂಭೀರವಾದಂತೆ ಅಮೆರಿಕದಲ್ಲಿ ಸ್ಟೇಹೋಮ್ (ಲಾಕ್‌ಡೌನ್) ಘೋಷಣೆ ಮಾಡಲಾಯಿತು. ಕಡಿಮೆ ಸಮಯದಲ್ಲಿ ನಿರ್ದೇಶಕ, ಒಬ್ಬ ನಟ, ಸಿನಿಮಾಟೊಗ್ರಾಫರ್ ಒಳಗೊಂಡ ಐದಾರು ಸಿಬ್ಬಂದಿ ಮಾತ್ರ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದರು. ಲಾಕ್‌ಡೌನ್ ಸಮಯವಾಗಿದ್ದರಿಂದ ಚಿತ್ರೀಕರಣಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವ ಹಾಗಿರಲಿಲ್ಲ. ಇದನ್ನೇ ಸವಾಲಾಗಿ ತೆಗೆದುಕೊಂಡ ಕಲ್ಪಕ್ ನೇತೃತ್ವದ ತಂಡ, ಫೋನ್‌ನಲ್ಲಿ ಒಂದು ದೃಶ್ಯವನ್ನು ಒಂದೇ ಟೇಕ್‌ನಲ್ಲಿ ಚಿತ್ರೀಕರಣ ನಡೆಸಿ, ಯಶಸ್ವಿಯಾಗಿದೆ. 'ಎಲ್ಲಾ ದೃಶ್ಯಗಳು ಒಂದೇ ಟೇಕ್‌ನಲ್ಲಿ ಚೆನ್ನಾಗಿ ಬಂದವು. ನಿರ್ದೇಶಕರಿಗೆ ಇಷ್ಟವಾಯಿತು' ಎಂದು ಶೂಟಿಂಗ್ ಸವಾಲುಗಳನ್ನು ಪಾಠಕ್ ಬಿಚ್ಚಿಟ್ಟರು.

ಇದೇನು ಸುಲಭದ ಕೆಲಸವಾಗಿರಲಿಲ್ಲ. ಮೊಬೈಲ್, ವೃತ್ತಿಪರ ಸಿನಿಮಾ ಚಿತ್ರೀಕರಣದ ಕ್ಯಾಮೆರಾದಷ್ಟು ಭಾರವಿರುವುದಿಲ್ಲ. ಹಾಗಾಗಿ ಅಲುಗಾಡದಂತೆ ಅದನ್ನು ಹಿಡಿಯುವುದೇ ಸವಾಲು. ಕ್ಯಾಮೆರಾ ಹಿಡಿಕೆ, ಧ್ವನಿ ಉಪಕರಣ, ಬ್ಯಾಟರಿ, ಲೆನ್ಸ್‌ಗಳು, ಫಿಲ್ಟರ್, ಮ್ಯಾನ್ಯುವಲ್ ಕಂಟ್ರೋಲ್ ಮಾಡಲು ವಿಡಿಯೊ ಆ್ಯಪ್‌ಗಳನ್ನು ಬಳಸಿ ಈ ಚಿತ್ರೀಕರಣ ಮಾಡಲಾಗಿದೆ.

## ಮೊಬೈಲ್ ಚಿತ್ರೀಕರಣದ ಟ್ರೆಂಡ್

'ಪ್ರಸ್ತುತ ಸನ್ನಿವೇಶದಲ್ಲಿ ಕಡಿಮೆ ಬಂಡವಾಳದ ಸಿನಿಮಾ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಐಫೋನ್‌ನಲ್ಲಿ ಸಿನಿಮಾ ಚಿತ್ರೀಕರಿಸುವುದು ಉತ್ತಮ ಉಪಾಯ' ಎನ್ನುತ್ತಾರೆ ಪಾಠಕ್.

'ನಾನು ಮೊದಲ ಬಾರಿಗೆ ಮೊಬೈಲ್ ಬಳಸಿ ಚಿತ್ರೀಕರಣ ಮಾಡಿದ್ದಾರರೂ,ಈ ಹಿಂದೆ ಬೇರೆ ಸಿನಿಮಾ ಚಿತ್ರೀಕರಣಕ್ಕೆ ಸೆಲ್‌ಫೋನ್‌ಗಳನ್ನು ಬಳಸಲಾಗಿದೆ. ಆದರೆ ಅದನ್ನೇ ಪ್ರಮುಖ ಸಾಧನವನ್ನಾಗಿ ಪರಿಗಣಿಸಿರಲಿಲ್ಲವಷ್ಟೇ. ಭವಿಷ್ಯದಲ್ಲಿ ಸಿನಿಮಾ ತಾಂತ್ರಿಕತೆಯಲ್ಲೂ ಬದಲಾವಣೆಯಾಗುತ್ತದೆ. ಸೆಲ್‌ಫೋನ್ ಕ್ಯಾಮೆರಾಗಳಿಗೂ ಈಗ ಲೆನ್ಸ್ ಸಿಗುತ್ತವೆ. ಆ್ಯಪ್‌ಗಳಿವೆ. ಕಡಿಮೆ ಬಜೆಟ್‌ನಲ್ಲಿ ಐಫೋನ್‌ನಲ್ಲೇ ಸಿನಿಮಾ ಚಿತ್ರೀಕರಿಸುವುದನ್ನು ನೋಡುತ್ತೀರಿ' ಎಂದು ಭವಿಷ್ಯ ನುಡಿಯುತ್ತಾರೆ..

## ಹಾಲಿವುಡ್‌ನಲ್ಲಿ ಭಾರತೀಯರ ಚಿತ್ರ

ಅಮೆರಿಕದಲ್ಲಿರುವ ಭಾರತೀಯರೇ ಸೇರಿಕೊಂಡು ಮಾಡಿರುವ 'ಅಮಿಸ್ಟ್ ಮೈ ಓನ್', ಅಮೆರಿಕದ ಲಾಸ್‌ಏಂಜಲೀಸ್‌ನಲ್ಲಿ ಭಾರತೀಯ ಚಾಲಕನೊಬ್ಬ ತನ್ನ ಬಾಸ್‌ನ ಗರ್ಲ್‌ಫ್ರೆಂಡ್ ಜೊತೆ ಪ್ರೇಮಕ್ಕೆ ಬೀಳುವ ಕಥೆಯನ್ನು ಹೊಂದಿದೆ.

ಈ ಸಿನಿಮಾವನ್ನು ಮರಾಠಿಯ 'ಸ್ಲಾಮ್‌ಬುಕ್' ಸಿನಿಮಾ ನಿರ್ದೇಶಿಸಿದ್ದ ಋತುರಾಜ್ ದಲ್ಗಡೆ ನಿರ್ದೇಶಿಸಿದ್ದಾರೆ. ಅವರೇ ಚಿತ್ರಕತೆ ಬರೆದಿದ್ದಾರೆ. 'ಗೋರ್ ಹರಿ ದಸ್ತನ್', 'ಸಿಂಧುತಾಯಿ ಸಪ್ಕಲ್' ಚಿತ್ರ ನಿರ್ಮಾಣ ಮಾಡಿದ ಶೇಖರ್ ರಹಾಟೆ ಬಂಡವಾಳ ಹೂಡಿದ್ದು, ಅವರೇ ಈ ಚಿತ್ರಕ್ಕೆ ನಾಯಕ.

## ಕಲ್ಪಕ್ ಹಾಲಿವುಡ್‌ಗೆ ಹಾರಿದ್ದು

ಮುಂಬೈನಲ್ಲಿ ಫೋಟೊ ಜರ್ನಲಿಸ್ಟ್ ಆಗಿ ವೃತ್ತಿ ಆರಂಭಿಸಿದ ಕಲ್ಪಕ್ ಪಾಠಕ್ ಒಬ್ಬ ಸಂವೇದನಾಶೀಲ ಛಾಯಾಗ್ರಾಹಕ. ಮುಂಬೈ 26/11 ಭಯೋತ್ಪಾದನಾ ದಾಳಿಯ ಸಂದರ್ಭದಲ್ಲಿ ಅವರು ತೆಗೆದ ಫೋಟೊಗಳಿಗೆ ಆ ವರ್ಷದ 'ಉತ್ತಮ ಫೋಟೊ ಜರ್ನಲಿಸ್ಟ್' ಪ್ರಶಸ್ತಿ ದೊರೆತಿತ್ತು. ಪುಣೆಯ ಎಫ್‌ಟಿಐಐನಲ್ಲಿ ಪದವಿ ಪಡೆದ ಅವರು, ಲಾಸ್ ಏಂಜಲೀಸ್‌ನ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ ಸಿನಿಮಾಟೊಗ್ರಫಿ ಕಲಿತಿದ್ದಾರೆ. ಸದ್ಯ ಅಲ್ಲಿಯೇ ನೆಲೆಸಿದ್ದಾರೆ.

ತನ್ನ ಮೇಲೆ ಸಿನಿಮಾ ಪ್ರಭಾವ ಬೀರಿದ್ದು 1998ರ 'ದಿಲ್ ಸೇ' ಚಿತ್ರ ಎನ್ನುತ್ತಾರೆ ಕಲ್ಪಕ್. 'ಆ ಸಿನಿಮಾ ಬಿಡುಗಡೆಯಾದಾಗ ನನ್ನ ವಯಸ್ಸು 13. ಅದರ ನಿರ್ದೇಶಕ ಮಣಿರತ್ನಂ, ಸಿನಿಮಾಟೊಗ್ರಾಫರ್ ಸಂತೋಷ್ ಶಿವನ್, ಎ.ಆರ್. ರೆಹಮಾನ್ (ಸಂಗೀತ ನಿರ್ದೇಶಕ) ನನ್ನ ಮೇಲೆ ಭಾರೀ ಪ್ರಭಾವ ಬೀರಿದ್ದರು. ಆ ಸಿನಿಮಾದ ಕಥೆ, ದೃಶ್ಯಾವಳಿ, ಧ್ವನಿ ಎಲ್ಲವೂ ನನ್ನನ್ನು ಈಗಲೂ ಕಾಡುತ್ತವೆ. ಫಿಲ್ಮ್ ಫೋಟೊಗ್ರಫಿ ಮೂಲಕವೇ ನನ್ನ ಅಭ್ಯಾಸ ಆರಂಭಿಸಿದ್ದು' ಎನ್ನುತ್ತಾರೆ.

ಕಲ್ಪಕ್ ಮುಂಬೈನ ತಬಲಾ ಹೌಸ್‌ನಲ್ಲಿ ಒಂದು ವರ್ಷ ಅಸಿಸ್ಟೆಂಟ್ ನಿರ್ದೇಶಕನಾಗಿ ಕೆಲಸ ಮಾಡಿದ್ದರು. ಬಳಿಕ ಸಿನಿಮಾಟೊಗ್ರಫಿ ಕಲಿಯಲು ಲಾಸ್ ಏಂಜಲೀಸ್‌ನಲ್ಲಿ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿ ಸೇರಿದರು. ಸದ್ಯ ಅಲ್ಲಿಯೇ ನೆಲೆಸಿದ್ದಾರೆ.

## ಕಲ್ಪಕ್ ಸಿನಿಮಾ, ಪ್ರಶಸ್ತಿಗಳು

ಕಲ್ಪಕ್ 20ಕ್ಕೂ ಹೆಚ್ಚು ಕಿರುಚಿತ್ರ ಹಾಗೂ 'ದಿ ಬಿಗ್ ರಾಂಟ್', 'ಅನದರ್ ಟೈಮ್' ಸಿನಿಮಾಗಳು ಸೇರಿದಂತೆ ಹಾಲಿವುಡ್‌ನಲ್ಲಿ ಐದಾರು ಸಿನಿಮಾಗಳಿಗೆ ಸಿನಿಮಾಟೋಗ್ರಾಫರ್ ಆಗಿ ಕೆಲಸ ಮಾಡಿದ್ದಾರೆ.

ಅವರ 'ಅನದರ್ ಟೈಮ್' ಚಿತ್ರಕ್ಕೆ ಆರು ಅಂತರರಾಷ್ಟ್ರೀಯ ಪ್ರಶಸ್ತಿಗಳು ದೊರೆತಿವೆ. ಆ ಸಿನಿಮಾ ಇತ್ತೀಚೆಗೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿದೆ. 'ಬ್ಲಾಕ್‌ಔಟ್' ಕಿರುಚಿತ್ರಕ್ಕೆ 'ನ್ಯೂಯಾರ್ಕ್ ಸಿನಿಮಾಟೋಗ್ರಫಿ ಪ್ರಶಸ್ತಿ' ದೊರೆತಿದ್ದು, ಆ ಚಿತ್ರ ಪ್ರತಿಷ್ಠಿತ ವಾರ್ನರ್ ಬ್ರುಸೊ ಸ್ಟುಡಿಯೊದಲ್ಲಿ ಪ್ರದರ್ಶನವಾಗಿದೆ. 'ಐ ಯಾಮ್ ಓಕೆ' ಸಾಕ್ಷ್ಯಚಿತ್ರಕ್ಕೆ 'ಬಾಫ್ತಾ ಗ್ರಾಂಟ್ ' ಪ್ರಶಸ್ತಿ ಸಿಕ್ಕಿದೆ. ಇದು ಆಸ್ಕರ್ ನಂತರದ ಪ್ರತಿಷ್ಠಿತ ಪ್ರಶಸ್ತಿ.